ಅ) ವರ್ಷ	ಅನುದಾನ ಬಿಡುಗಡೆ	ವೆಚ್ಚ	ಉಳಿಕೆ
2000–01	46,52,67,362	43,81,61,850	2,71,05,512
2001–02	45,82,84,000	44,54,83,735	1,28,00,265
2002–03	57,38,67,300	46,73,74,800	10,64,92,500

ರಾಜ್ಯದಲ್ಲಿರುವ ಜಿಲ್ಲಾ:ಗ್ರಾಮ ಪಂಚಾಯಿತಿಗಳ ಆದಾಯ ಮತ್ತು ವೆಚ್ಚದ ಬಗ್ಗೆ

2891(285) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತಿಗಳು 2000–2001, 2002ರಲ್ಲಿ ಗಳಿಸಿದ ಆದಾಯ ಮಾಡಿದ ವೆಚ್ಚ ಹಾಗೂ ವೆಚ್ಚ ಮಾಡದೆ ಉಳಿಸಿದ ಹಣವೆಷ್ಟು;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತಿಗಳು 2000–2001, 2001–2002ರಲ್ಲಿ ಗಳಿಸಿದ ಆದಾಯ, ಮಾಡಿದ ವೆಚ್ಚ ಹಾಗೂ ವೆಚ್ಚ ಮಾಡದೆ ಉಳಿಸಿದ ಹಣದ ವಿವರಗಳು ಈ ಕೆಳಕಂಡಂತಿವೆ.

(ರೂ. ಕೋಟಿಗಳಲ್ಲಿ)

ವರ್ಷ	*ಗಳಿಸಿದ ಆದಾಯ	ಮಾಡಿದ ವೆಚ್ಚ	ಉಳಿದ ಹಣ
2000–01	1949.43	1867.67	81.76
2001–02	1653.59	1596.68	56.91

ಶಿವಮೊಗ್ಗ ಜಿಲ್ಲೆಯಲ್ಲಿ ಖಾಸಗಿ ಟಿ.ಸಿ.ಹೆಚ್ ಕಾಲೇಜ್‌ಗೆ ಸಲ್ಲಿಸಿರುವ ಅರ್ಜಿಗಳು

2892(3267) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ವತಿಯಿಂದ ಹೊಸದಾಗಿ ಖಾಸಗಿ ಟಿ.ಸಿ.ಹೆಚ್. ಕಾಲೇಜ್ ಮಂಜೂರು ಮಾಡುವ ಯೋಜನೆ ಸರ್ಕಾರದ ಪ್ರಸ್ತಾವನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರಕ್ಕೆ ಬಂದಿರುವ ಅರ್ಜಿಗಳು ಎಷ್ಟು;

ಇ) ಈ ಅರ್ಜಿ ಮೂಲಕ ಸಂಗ್ರಹಿಸಲಾದ ಠೇವಣಿ ಹಣವೆಷ್ಟು;

ಈ) ಶಿವಮೊಗ್ಗ ಜಿಲ್ಲೆಯಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು: ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಇದೆ.

ಆ) 637

ಇ) ಪ್ರತಿ ಅರ್ಜಿಗೆ ರೂ. 50,000.00

ಈ) 21 ಅರ್ಜಿಗಳು

ಉ) ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತೆ ಇವೆ:-